## ವರ್ಣಮಾಲೆ

ಕನ್ನಡದಲ್ಲಿ ಒಟ್ಟು ೪೯(49)ಅಕ್ಷರಗಳಿವೆ ಇವುಗಳನ್ನು ವರ್ಣಗಳೆಂದು ಕರೆಯುತ್ತಾರೆ ಈ ಅಕ್ಷರಗಳ ಕ್ರಮಬದ್ಧ ಜೋಡಣೆಗೆ 'ವರ್ಣಮಾಲೆ' ಎಂದು ಹೆಸರು.

ವರ್ಣಮಾಲೆಯಲ್ಲಿ ಪ್ರಮುಖವಾಗಿ ೩ ವಿಧಗಳು

೧) ಸ್ವರಗಳು ೨) ವ್ಯಂಜನಗಳು ೩) ಯೋಗವಾಹಗಳು

೧) ಸ್ವರಗಳು: ಸ್ವತಂತ್ರವಾಗಿ ಉಚ್ಚರಿಸಲಾಗುವ ಅಕ್ಷರಗಳು ಸ್ವರಗಳು.

ಒಟ್ಟು ಸ್ವರಗಳು : ೧೩(13)

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

೨) ವ್ಯಂಜನಗಳು : ಸ್ವರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳು ವ್ಯಂಜನಗಳು.

ವ್ಯಂಜನಗಳಲ್ಲಿ ಎರಡು ವಿಧ :

ಅ) ವರ್ಗೀಯ ವ್ಯಂಜನಗಳು

ಆ) ಅವರ್ಗೀಯ ವ್ಯಂಜನಗಳು

ಅ) ವರ್ಗೀಯ ವ್ಯಂಜನಗಳು:೨೫(25)

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಆ) ಅವರ್ಗೀಯ ವ್ಯಂಜನಗಳು: ೯(9)

ಯ ರ ಲ ವ ಶ ಷ ಸ ಹ ಳ

೩) ಯೋಗವಾಹಗಳು: ೨(2)

ಬೇರೆ ಅಕ್ಷರಗಳ ಜೊತೆಯಲ್ಲಿ ಮಾತ್ರ ಉಚ್ಚರಿಸಬಹುದಾದ ಅಕ್ಷರ ಎಂದರ್ಥ.

ಅನುಸ್ವಾರ: ಅಂ. ವಿಸರ್ಗ: ಅಃ

---

## ಸಂಯುಕ್ತಾಕ್ಷರಗಳು

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ.

ಸಂಯುಕ್ತಾಕ್ಷರಗಳಲ್ಲಿ ಎರಡು ವಿಭಾಗಗಳಿವೆ.

೧.ಸಜಾತೀಯ ಸಂಯುಕ್ತಾಕ್ಷರಗಳು: ಒಂದೇ ಜಾತಿಯ ಎರಡು ವ್ಯಂಜನಗಳು ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವುವು.

ಉದಾ: ಅಪ್ಪ, ಅಮ್ಮ, ಅಣ್ಣ, ಅಕ್ಕರ, ಅಕ್ಕಪಕ್ಕ, ರಕ್ಕಸ.

---

೨) ವಿಜಾತೀಯ ಸಂಯುಕ್ತಾಕ್ಷರಗಳು: ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಒಂದಕೊಂದು ಕೂಡಿಕೊಂಡು ಉಂಟಾಗುವ ಅಕ್ಷರವು ವಿಜಾತೀಯ ಸಂಯುಕ್ತಾಕ್ಷರಗಳು.

ಉದಾ: ಚಕ್ರ, ಆಜ್ಞೆ, ಸ್ತ್ರೀ, ವಸ್ತ್ರ.

---

## ವಚನಗಳು

ವಚನ ಎಂದರೆ ಸಂಖ್ಯೆ ಎಂದರ್ಥ.

ಕನ್ನಡದಲ್ಲಿ ವಚನಗಳು ಎರಡು

1.ಏಕವಚನ 2.ಬಹುವಚನ

1.ಏಕವಚನ : ಒಂದು ಎಂಬುದನ್ನು ಸೂಚಿಸುವ ಶಬ್ಧಗಳಿಗೆ ಏಕವಚನ ಎನ್ನುವರು.

2.ಬಹುವಚನ : ಒಂದಕಿಂತ ಹೆಚ್ಚು ಎಂದು ಸೂಚಿಸುವ ಶಬ್ಧಗಳಿಗೆ ಬಹುವಚನ ಎನ್ನುವರು.

| ಏಕವಚನ. | | ಬಹುವಚನ |
|---|---|---|
| 1. ಪತ್ರ | - | ಪತ್ರಗಳು |
| 2. ಎತ್ತು | - | ಎತ್ತುಗಳು |
| 3. ಪತ್ರಿಕೆ | - | ಪತ್ರಿಕೆಗಳು |
| 4. ನಾಯಕ | - | ನಾಯಕರು |
| 5. ತಮ್ಮ | - | ತಮ್ಮಂದಿರು |
| 6. ಅಣ್ಣ | - | ಅಣ್ಣಂದಿರು |

---

## ನಾಮಪದ

ವ್ಯಕ್ತಿ, ವಸ್ತು, ಸ್ಥಳ ಮತ್ತು ಪ್ರಾಣಿಗಳ ಹೆಸರುಗಳನ್ನು ಸೂಚಿಸುವ ಪದಗಳಿಗೆ ನಾಮಪದ ಎನ್ನುವರು.

ಉದಾ: ಮಂಡ್ಯ, ತಿಮ್ಮಣ್ಣ, ಹುಲಿ, ಕಲ್ಲು, ಇತ್ಯಾದಿ.

ನಾಮಪದದಲ್ಲಿ ಒಂಬತ್ತು ವಿಧಗಳು, ಅವುಗಳಲ್ಲಿ ವಸ್ತು ವಾಚಕ ನಾಮಪದವು ಒಂದು. ಈ ವಸ್ತುವಾಚಕ ನಾಮಪದಗಳಲ್ಲಿ ಮೂರು ವಿಧ.

1.ರೂಢನಾಮ

2.ಅಂಕಿತನಾಮ

3.ಅನ್ವರ್ಥನಾಮ

1.ರೂಢನಾಮ : ರೂಢಿಯಿಂದ ಬಂದ ಪದಗಳಿಗೆ ರೂಢನಾಮ ಎನ್ನುವರು.

ಉದಾ: ನದಿ, ಪರ್ವತ, ಹೆಂಗಸು, ಪಟ್ಟಣ,ದೇಶ ಇತ್ಯಾದಿ.

---

2.ಅಂಕಿತನಾಮ : ಗುರುತಿಗಾಗಿ ಹಾಗೂ ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳಿಗೆ ಅಂಕಿತನಾಮ ಎನ್ನುವರು.

ಉದಾ: ರಮೇಶ, ಹಸೀನಾ, ಮೇರಿ, ಗಂಗಾ, ಬ್ರಹ್ಮಪುತ್ರ, ಭಾರತ ಇತ್ಯಾದಿ.

---

3.ಅನ್ವರ್ಥನಾಮ : ರೂಪ, ಗುಣ, ವೃತ್ತಿ, ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳಿಗೆ ಅನ್ವರ್ಥನಾಮ ಎನ್ನುವರು.

ಉದಾ: ವ್ಯಾಪಾರಿ, ರೋಗಿ, ಯೋಗಿ, ಬಳೆಗಾರ, ಪೂಜಾರಿ, ಶಿಕ್ಷಕಿ, ವಿದ್ಯಾರ್ಥಿನಿ

---

ಲಿಂಗಗಳು

ವಸ್ತು ಸ್ತ್ರೀ ಮತ್ತು ಪುರುಷರು ಎಂದು ಸೂಚಿಸಲು ಬಳಸುವ ಪದಗಳೇ ಲಿಂಗಗಳು.

ಕನ್ನಡದಲ್ಲಿ ಲಿಂಗಗಳಲ್ಲಿ ೩(3) ವಿಧಗಳಿವೆ

1.ಪುಲ್ಲಿಂಗ

2.ಸ್ತ್ರೀಲಿಂಗ

3.ನಪುಂಸಕ ಲಿಂಗ

1.ಪುಲ್ಲಿಂಗ : ಯಾವುದೆ ಶಬ್ಧ ಪ್ರಯೋಗ ಮಾಡಿದಾಗ ಪುರುಷ ಎಂಬ ಅರ್ಥ ಮನಸ್ಸಿಗೆ ಹೊಳೆದರೆ ಅದು ಪುಲ್ಲಿಂಗ.

ಉದಾ: ಶಿವಭಕ್ತ, ರಾಜ, ಗಂಡು ಇತ್ಯಾದಿ

---

2.ಸ್ತ್ರೀಲಿಂಗ : ಯಾವುದೆ ಶಬ್ಧ ಪ್ರಯೋಗ ಮಾಡಿದಾಗ ಸ್ತ್ರೀ ಎಂಬ ಅರ್ಥ ಮನಸ್ಸಿಗೆ ಹೊಳೆದರೆ ಅದು ಸ್ತ್ರೀಲಿಂಗ.

ಉದಾ: ಸಿಂಧು, ರಾಣಿ, ಹೆಣ್ಣು ಇತ್ಯಾದಿ.

---

3.ನಪುಂಸಕ ಲಿಂಗ: ಪುರುಷ ಅಥವಾ ಸ್ತ್ರೀ ಎಂಬ ಅರ್ಥದಿಂದ ಬಳಕೆಯಾಗದ ಪದಗಳು ನಪುಂಸಕ ಲಿಂಗಗಳು.

ಉದಾ: ಗಿಳಿ, ಹಣ್ಣು, ಜಿಂಕೆ ಇತ್ಯಾದಿ.

---

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| ರಾಜ | ರಾಣಿ | ಗಿಳಿ |
| ತಂದೆ | ತಾಯಿ | ಹಣ್ಣು |
| ಅಣ್ಣ | ಅಕ್ಕ | ಜಿಂಕೆ |
| ಶಿಕ್ಷಕ | ಶಿಕ್ಷಕಿ | ಪುಸ್ತಕ |
| ನಟ | ನಟಿ | ಮನೆ |
| ವಿದ್ಯಾರ್ಥಿ | ವಿದ್ಯಾರ್ಥಿನಿ | ಮಗು |

| | | |
|---|---|---|
| ಕುಮಾರ | ಕುಮಾರಿ | ಮರ |
| ತಮ್ಮ | ತಂಗಿ | ಮೇಜು |

ವಿಭಕ್ತಿ ಪ್ರತ್ಯಯ

ವಾಕ್ಯ ರಚನೆಯ ಸಂದರ್ಭದಲ್ಲಿ ನಾಮ ಪ್ರಕೃತಿಗಳು ಪಡೆಯಬೇಕಾದ ಅರ್ಥ ವಿಶೇಷಗಳನ್ನು ತಂದುಕೊಡಲು ಸಹಾಯ ಮಾಡುವ ಕಾರಕಗಳೇ ಪ್ರತ್ಯಯಗಳು, ಇವುಗಳನ್ನೆ ವಿಭಕ್ತಿ ಪ್ರತ್ಯಯಗಳೆಂದು ಕರೆಯುತ್ತಾರೆ.

| ವಿಭಕ್ತಿ | ವಿಭಕ್ತಿ ಪ್ರತ್ಯಯ | ನಾಮಪದ |
|---|---|---|
| ಪ್ರಥಮಾ | ಉ | ರಾಜನು |
| ದ್ವಿತೀಯಾ | ಅನ್ನು | ರಾಜನನ್ನು |
| ತೃತೀಯಾ | ಇಂದ | ರಾಜನಿಂದ |
| ಚತುರ್ಥಿ | ಗೆ. ಇಗೆ. ಕ್ಕೆ | ರಾಜನಿಗೆ |
| ಪಂಚಮಿ | ದೆಸೆಯಿಂದ | ರಾಜನ ದೆಸೆಯಿಂದ |
| ಷಷ್ಠೀ | ಅ | ರಾಜನ |
| ಸಪ್ತಮೀ | ಅಲ್ಲಿ | ರಾಜನಲ್ಲಿ |
| ಸಂಬೋಧನೆ | ಎ. ಇರಾ | ರಾಜನೆ |